# ಮೂವರಿಗೆ ಕೇಂದ್ರ ಸಾಹಿತ್ಯ ಪ್ರಶಸ್ತಿ

## ನಾಗಭೂಷಣ್, ಲಕ್ಷ್ಮೀನಾರಾಯಣ, ಬಸು ಬೇವಿನಗಿಡದಗೆ ಗೌರವ

**ವಿಜಯವಾಣಿ ಸುದ್ದಿಜಾಲ ಬೆಂಗಳೂರು**


ಕೇಂದ್ರ ಸಾಹಿತ್ಯ ಅಕಾಡೆಮಿ ವಿವಿಧ ಪ್ರಕಾರದ ಸಾಹಿತ್ಯ ಕೃತಿಗಳಿಗೆ ನೀಡುವ ಪ್ರಶಸ್ತಿಯನ್ನು ಘೋಷಣೆ ಮಾಡಿದೆ. ಕನ್ನಡ ಪ್ರಮುಖ ಲೇಖಕ ಡಿ.ಎಸ್.ನಾಗಭೂಷಣ್ ಅವರ 'ಗಾಂಧಿ ಕಥನ'ಕ್ಕೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಬಸು ಬೇವಿನಗಿಡದ ಅವರು ಬರೆದಿರುವ 'ಓಡಿ ಹೋದ ಹುಡುಗ' ಪುಸ್ತಕ ಬಾಲ ಪುರಸ್ಕಾರ ಪ್ರಶಸ್ತಿಗೆ ಆಯ್ಕೆಯಾಗಿದೆ. ಅಕಾಡೆಮಿ ನೀಡುವ ಯುವ ಪುರಸ್ಕಾರಕ್ಕೆ ಎಚ್.ಲಕ್ಷ್ಮೀನಾರಾಯಣ ಸ್ವಾಮಿ ಅವರ 'ತೊಗಲ ಚೀಲದ ಕರ್ಣ' ಎಂಬ ಮಹಾಕಾವ್ಯ ಆಯ್ಕೆಯಾಗಿದೆ. ಮುಖ್ಯ ಪ್ರಶಸ್ತಿಯು 1 ಲಕ್ಷ ರೂ. ಹಾಗೂ ಫಲಕ ಒಳಗೊಂಡಿದ್ದರೆ, ಯುವ ಹಾಗೂ ಬಾಲ ಪುರಸ್ಕಾರಗಳು 50 ಸಾವಿರ ರೂ. ಮತ್ತು ಪ್ರಶಸ್ತಿ ಫಲಕಗಳನ್ನು ಒಳಗೊಂಡಿದೆ.

ಯುವ ಸಾಹಿತ್ಯ ಪ್ರಶಸ್ತಿಗೆ ಸಾಹಿತಿಗಳಾದ ಕಮಲಾ ಹಂಪನಾ, ಡಾ. ಜಗದೀಶ್ ಕೊಪ್ಪ, ವಿಜಯಕುಮಾರಿ ತೀರ್ಪುಗಾರರಾಗಿದ್ದರು. ಬಾಲ ಸಾಹಿತ್ಯ ಪ್ರಶಸ್ತಿಗೆ ಟಿ.ಪಿ.ಅಶೋಕ, ಮಾಲತಿ ಪಟ್ಟಣಶೆಟ್ಟಿ, ಎಸ್.ದಿವಾಕರ ಹಾಗೂ ಪ್ರಮುಖ ಕೃತಿ ಆಯ್ಕೆಗೆ ಬೋಳುವಾರ ಮಹಮ್ಮದ್ ಕುಂಞ, ಅಮರೇಶ ನುಗಡೋಣಿ, ಸಬೀಹಾ ಭೂಮಿಗೌಡ ತೀರ್ಪುಗಾರರಾಗಿದ್ದರು.

ಪುಸ್ತಕ ಆಯ್ಕೆ ಪ್ರಕ್ರಿಯೆಯು ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಸಮಿತಿ ಸಂಯೋಜಕ ಸರಜೂ ಕಾಟ್ಕರ್ ಅವರ ಉಸ್ತುವಾರಿಯಲ್ಲಿ ನಡೆಯಿತು. ಪ್ರಶಸ್ತಿಗಳನ್ನು ಫೆಬ್ರವರಿ ಮಾಹೆ ದೆಹಲಿಯಲ್ಲಿ ನಡೆಯುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು.


ನಾಗಭೂಷಣ್


ಬಸು ಬೇವಿನಗಿಡದ


ಲಕ್ಷ್ಮೀನಾರಾಯಣ

> ಪ್ರಶಸ್ತಿ ಸಹಜವಾಗಿ ಖುಷಿ ನೀಡಿದೆ. ಗಾಂಧಿ ಕೃತಿ ಆಗಿರುವುದರಿಂದ ಮುಖ್ಯವಾಗಿ ಆಶ್ಚರ್ಯ ಕೂಡ ತಂದಿದೆ. ಇದರಲ್ಲಿ ಗಾಂಧಿ ಪರ-ವಿರೋಧ ಇಲ್ಲ. ವಸ್ತುಸ್ಥಿತಿ ಬರೆದಿದ್ದೇನೆ.
>
> | ಡಿ.ಎಸ್. ನಾಗಭೂಷಣ್
> ಸಾಹಿತಿ

Vijayavani 31.12.2021